# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ. 70/2025

ಚಾಸಾ-5 ಪ್ರಾಸಾ-4

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 17-01-2026

| | | |
|---|---|---|
| ಹೆಸರು | : | ನಿಂಗಣ್ಣ ಗೌಡ |
| ತಂದೆಯ ಹೆಸರು | : | ಪರಮನಗೌಡ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸಸ್ಥಳ | : | ತಾಂಡೂರು ತೆಲಂಗಾಣ |

-: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

2011 ರಿಂದ 2013 ರವರೆಗೆ ನಾನು ಆಡಳಿತ ಅಧಿಕಾರಿಯಾಗಿ SRSL ಕಾರ್ಖಾನೆ, ಹವಳಗಾದಲ್ಲಿ ಕಾರ್ಯನಿರ್ವಹಿಸಿರುತ್ತೇನೆ.

ನಮ್ಮ ಕಾರ್ಖಾನೆಯವರು ನೀಡಿದ ಅಧಿಕಾರದ ಮೇರೆಗೆ ನಮ್ಮ ಕಚೇರಿಯ ಅಧೀನದಲ್ಲಿ ಕೆಲಸ ಮಾಡುವ 5 ನೇ ಆರೊಪಿ, ಚಾಸಾ 4 ಮತ್ತು ನಾನು ಇಂಡೆಂಟ ಸ್ಲಿಪ ನೀಡುವ ಅಧಿಕಾರ ಹೊಂದಿರುತ್ತೇವೆ ಮತ್ತು ನಮ್ಮಲ್ಲಿ ಯಾರಾದರೂ ಒಬ್ಬರು ಸಹಿ ಮಾಡಿದರೆ ಸಾಕಾಗುತ್ತದೆ. ಅದರಂತೆ ನಮ್ಮ ಕಾರ್ಖಾನೆಯಲ್ಲಿ ಡೀಸೆಲ ದುರ್ಬಳಕೆ ಮಾಡಿಕೊಂಡು ತಮ್ಮ ಸ್ವಂತ ಲಾಭಕ್ಕೆ ಬಳಸಿಕೊಂಡ ಕುರಿತು ದೂರು ಬಂದಿರುತ್ತದೆ. ನಮ್ಮ ಕಾರ್ಖಾನೆಯು ಸುಮಾರು 5 ಪೆಟ್ರೋಲ ಪಂಪಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು ಇರುತ್ತದೆ. ನಾವು ಒಂದು ಇಂಡೆಂಟನಲ್ಲಿ ಸಹಿ ಮಾಡಿ ಅದನ್ನು ಕಂಪ್ಯೂಟರ ಆಪರೇಟರ ಹತ್ತಿರ ಪರಿಶೀಲನೆಗೊಂಡು ನಂತರ ಆಯಾ ಪೆಟ್ರೋಲಪಂಪಗೆ ಕಳುಹಿಸಕೊಡಲಾಗುತ್ತದೆ. ಮತ್ತು ನಮ್ಮ ಕಾರ್ಖಾನೆಯ ಶಾಲಾ ವಾಹನದಲ್ಲಿ ಇಟ್ಟಂತಹ ಇಂಡೆಂತ

ಸ್ಲಿಪಗಳು ದುರ್ಬಳಕೆ ಮಾಡಿಕೊಂಡು ಕುರಿತು ಮಾಹಿತಿ ಬಂದಿದರಿಂದ ನಾನು ಪೋಲಿಸರ ಮುಂದೆ ಒಟ್ಟು 20 ಇಂಡೆಂಟಗಳು ದುರುಪಯೋಗ ಆದ ಕುರಿತು ಮಾಹಿತಿ ನೀಡಿರುತ್ತೇನೆ. ಒಟ್ಟು 2265 ಲೀಟರ ಡೀಸೆಲ ದುರ್ಬಳಕೆ ಮಾಡಿಕೊಂಡಿದ್ದು ಅದರ ಮೌಲ್ಯ ಸುಮಾರು ರೂ. 1,19,051/- ಇರುತ್ತದೆ. ಸದರಿ ಅವ್ಯವಹಾರವು 3 ಪೆಟ್ರೋಲ ಬಂಕಗಳಲ್ಲಿ ನಡೆದಿದ್ದು ಅವುಗಳು ಮಹಾಂತೇಶ ಪೆಟ್ರೋಲ ಏಜೆನ್ಸಿ ಅಫಜಲಪುರದಲ್ಲಿ 1705 ಲೀಟರ, ಭಾಗ್ಯವಂತಿ ಪೆಟ್ರೋಲ ಬಂಕ ಬಗಲೂರುನಲ್ಲಿ 490 ಲೀಟರ ಮತ್ತು ಮಲ್ಲಿಕಾರ್ಜುನ ಪೆಟ್ರೋಲ ಬಂಕ ಬಗಲೂರುನಲ್ಲಿ 70 ಲೀಟರ ಡೀಸೆಲ ದುರ್ಬಳಕೆ ಮಾಡಿಕೊಂಡು ಕಾರ್ಖಾನೆಗೆ ವ್ಯಯ ಮಾಡಿರುತ್ತಾರೆ.

ದಿಃ 03-11-2013 ರಲ್ಲಿ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **D.K.** ವಕೀಲರಿಂದಃ-</u>

ಇಂಡೆಂಟನಲ್ಲಿ ಇಷ್ಟೆ ಡೀಸೆಲ ಪಡೆಯಬೇಕು ಎಂದು ಯಾವುದೇ ಮಿತಿ ಇರುವುದಿಲ್ಲ. ಆರೋಪಿತರು ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. 2 ನೇ ಆರೋಪಿ ಕಂಪ್ಯೂಟರ ಆಪರೇಟರ ಆಗಿ ಕರ್ತವ್ಯ ಮಾಡುತ್ತಿದ್ದನು. 2 ನೇ ಆರೋಪಿಗೆ ಕಂಪ್ಯೂಟರ ಆಪರೇಟರ ಮಾಡಲು ಬರುತ್ತಿಲ್ಲ ಎಂದರೆ ನನಗೆ ಗೊತ್ತಿಲ್ಲ. ಚಾಸಾ 1 ನನ್ನ ಮೇಲಾಧಿಕಾರಿ ಎಂದರೆ ಸರಿಯಲ್ಲ. ನಾವು ಇಂಡೆಂಟನಲ್ಲಿ ವಾಹನ ನೊಂದಣಿ ಸಂಖ್ಯೆ ನಮೂದಿಸುತ್ತೇವೆ ಎಂದರೆ ಸರಿ. ಸಹಿ ಮಾಡುವ ಸಮಯಕ್ಕೆ ನಾವು ಪರಿಶೀಲನೆ ಮಾಡುತ್ತಿದ್ದೆವು ಎಂದರೆ ಸರಿ. ಕಾರ್ಖಾನೆಯಲ್ಲಿ ಕರ್ತವ್ಯ ನಿರ್ವಹಿಸುವ ಎಲ್ಲಾ ವಾಹನಗಳ ಮಾಲೀಕರೊಂದಿಗೆ ಒಪ್ಪಂದ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಒಪ್ಪಂದ ಮಾಡಿಕೊಂಡ ವಾಹನಗಳಿಗೆ ಮಾತ್ರ ನಾವು ಡೀಸೇಲ ನೀಡುತ್ತಿದ್ದೇವೆ ಎಂದರೆ ಸಾಕ್ಷಿ ನಮ್ಮ ಕಂಪನಿಯ ವಾಹನಗಳಿಗೆ ನೀಡುತ್ತಿದ್ದೇವೆ ಎಂದು ನುಡಿಯುತ್ತಾರೆ. 2 ನೇ ಆರೋಪಿ ಮತ್ತು ನಮ್ಮ ನಡುವೆ ಆಗಾಗ ಕೆಲಸ ಕುರಿತು ಜಗಳವಾಗುತ್ತಿತ್ತು ಎಂದರೆ ಸರಿಯಲ್ಲ. ನಮ್ಮ ಕಾರ್ಖಾನೆಯಲ್ಲಿ ಪ್ರತಿಯಾೆಂದು ವಿಭಾಗಕ್ಕೆ ಒಬ್ಬ ಮುಖ್ಯಸ್ಥರು ಇರುತ್ತಾರೆ ಎಂದರೆ ಸರಿ. ಚಾಸಾ 4 ರವರನ್ನು ಕಾರ್ಖಾನೆಯವರು ಭ್ರಷ್ಟಾಚಾರ ಆರೋಪಣೆ ಮೇರೆಗೆ ಕರ್ತವ್ಯದಿಂದ ವಜಾ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2 ನೇ ಆರೋಪಿ ಯಾವತ್ತೂ ನಮ್ಮ ಕಾರ್ಖಾನೆಯಲ್ಲಿ ಕರ್ತವ್ಯ ನಿರ್ವಹಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರ ನೇಮಕಾತಿ ಕಾಗದ ಪತ್ರವನ್ನು

ತನಿಖಾಧಿಕಾರಿಗೆ ನಾನು ನೀಡಿಲ್ಲ ಎಂದರೆ ಸರಿ. ಇಂಡೆಂಟಗಳು ಯಾವ ದಿನಾಂಕದಂದು ನೀಡಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

<u>ಮರು ವಿಚಾರಣೆಃ **- ಇಲ್ಲ.**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ